ಅವಳಾಗೇ ಮಾತನಾಡಬೇಕು ಅಷ್ಟೆ...'

'ಅವಳು ಮಾತಾಡೋದಿಲ್ಲವಲ್ಲ... ಮತ್ತೆ ಇನ್ನು ಮೂರು ದಿನಕ್ಕೆ ನಾವು ಹೊರಟು ಬಿಡುತ್ತೇವೆ. ಮತ್ತೆ ಬರುವಾಗ ಅವಳನ್ನ ಇಲ್ಲೇ ನೋಡ್ತೀವೇನೇ... ನಿನಗೂ ಇದು ತಿಳಿಯದಿದ್ದರೆ ಮತ್ತೆ ಯಾರಿಗೆ ಹೇಳಲಿ?' ಸ್ವಲ್ಪ ಜೋರಾಗಿ ಚೀರಿದಂತೆ ಹೇಳಿದೆ.

ಅಷ್ಟರಲ್ಲಿ ಪ್ರಶಾಂತನ ಬೈಕ್ ಸದ್ದು ಕೇಳಿಸಿತು. ಅವನು ಅದರಿಂದ ಇಳಿಯಲೇ ಇಲ್ಲ. 'ಬಾರೋ ಹೊರಗೆ ಹೋಗಿ ಬರೋಣ' ಅಂದ. ಬೇಡ ಅನ್ನಿಸಿತು. ಹಿಂದಿನ ದಿನ ಅವನು ಮಾತಾಡಿದ್ದು ನನಗೆ ಹಿತವಾಗಿರಲಿಲ್ಲ. ಇವತ್ತು ಅವನ ಮನೇಲೂ ಅವನ ತಾಯಿ ತಂದೆಯರು ಸರಿಯಾಗಿ ವರ್ತಿಸಿದರು ಅನ್ನಿಸಿರಲಿಲ್ಲ. ಖಂಡಿತಾ ನನ್ನ ಮೂಡ್ ಕೆಟ್ಟಿತ್ತು. ಆದರೂ ಅವನ ಹಿಂದೆ ಕುಳಿತೆ. ಮತ್ತದೇ ಸಮುದ್ರ, ತೇಲಿಬರುತ್ತಿರುವ ಅಲೆಗಳು, ಅದರ ನೊರೆಗಳು, ಕುಣಿದಾಡುತ್ತಿರುವ ಜನರು... ಕೂಗಾಡುತ್ತಿರುವ ಮಕ್ಕಳು... ನೋಡುತ್ತಾ ಕುಳಿತೆವು. ಈ ಬಾಯಿ ಬಡುಕ ಮೌನವಾಗಿ ಕುಳಿತಿದ್ದ! ನನ್ನ ನಿರೀಕ್ಷೆಯನ್ನೂ ಮೀರಿ. ಇದೇನಪ್ಪ... ಹೀಗೆ ಅಂದುಕೊಂಡೆ.

'ಪ್ರಶ್ನಾ ಬಗ್ಗೆ ನಿನಗೇಕೆ ಕಾಳಜಿ?' ಜೀವಮಾನದಲ್ಲೇ ಮೊತ್ತ ಮೊದಲ ಬಾರಿಗೆ ಗಾಂಭೀರ್ಯ ಅನ್ನುವುದು ಅವನ ಮಾತು, ನಡವಳಿಕೆಯಲ್ಲಿ ತುಂಬಿ ಹರಿಯುತ್ತಿತ್ತು. ಆ ದನಿಯ ಹಿಂದಿರುವ ಕಾಠಿಣ್ಯ ನನ್ನನ್ನು ಅಲುಗಾಡಿಸಿತು. ಅವನೇ ಮುಂದುವರಿಸಿದ:

'ನನಗೇನೂ ಸಮಸ್ಯೆ ಇಲ್ಲ... ಆದರೆ ಅಮ್ಮ ಅಪ್ಪ ಇಬ್ಬರೂ ತುಂಬಾ ಅಪ್‌ಸೆಟ್ ಆಗಿದ್ದಾರೆ. ಎಷ್ಟೇ ವಿಶಾಲ ಹೃದಯಿಗಳು ಅಂದರೂ ಅದರ ಬುಡ ಸಂಕುಚಿತವೇ ಆಗಿರುತ್ತೆ ಅನ್ನುವುದನ್ನು ನಾವು ಮರೆಯಬಾರದು.' ಕಠೋರವಾಗಿ ಹೇಳಿದ. 'ನೀನು ಕೇವಲ ನನ್ನ ಬಾಲ್ಯ ಸ್ನೇಹಿತ ಮಾತ್ರ ಅಲ್ಲ ಕಣೋ. ನಿನಗೆ ನನ್ನ ಹೃದಯದಲ್ಲಿ ಸ್ಥಾನ ಇದೆ. ...ಹೇಳು ...ಏನು ನಿನ್ನ ಪ್ರಾಬ್ಲಂ?' ಅವನ ಧ್ವನಿ ಗಂಭೀರವಾಗಿದ್ದರೂ ಅತ್ಯಂತ ಪ್ರಾಮಾಣಿಕತೆಯಿಂದ ತುಂಬಿತ್ತು.

ನಾನು ಹೇಳಿದೆ 'ಪ್ರಶ್ನಾ ನಿಜವಾಗಿ ಮೊದಲಿನಂತೆ ಇಲ್ಲ ಕಣೊ... ಅವಳಲ್ಲಿದ್ದ ಹುಡುಗಿ ಕಳೆದುಹೋಗಿದ್ದಾಳೆ... ಅದೂ ಕೂಡ ಬಹಳ ಬೇಗ ಮತ್ತು ವೇಗವಾಗಿ... ನನ್ನ ಚಿಂತೆ ಅದು. ...ನಾನು ಅವಳನ್ನು ಬಾಲ್ಯದಿಂದಲೂ ಬಲ್ಲೆ ಕಣೊ... ಇದು ನಿಜವಾಗಿ ಸರಿಯಾಗಿಲ್ಲ...' ಕಳಕಳಿಯಿಂದ ಹೇಳಿದೆ.

ಅವನು ಜೋರಾಗಿ ನಕ್ಕ. 'ನಾನು ಅವಳು ಕೂಡ ಒಳ್ಳೆಯ ಸ್ನೇಹಿತರೇ ಕಣೊ. ಹಾಗೆಯೇ ನಾನು ನೀನು ಕೂಡ. ನಿಜ, ಮದುವೆ ಆದ ಹೊಸತರಲ್ಲಿ ಇದ್ದಂತೆ ಅವಳು ಈಗ ಇಲ್ಲ. ಆದರೆ ಈ ಬದಲಾವಣೆ ಸಹಜವೇ ಅಲ್ಲವೇ. ...ಅದನ್ನು ನಾನು ಒಪ್ಪಿಕೊಂಡಿದ್ದೀನಿ. ಹಾಗೆ ನೋಡಿದರೆ ಅವಳಿಗೆ ಅಲ್ಲಿ ಯಾವ ಕಷ್ಟವೂ ಇಲ್ಲ... ಅವಳಿಗೆ ಎಲ್ಲದಕ್ಕೂ ಸ್ವಾತಂತ್ರ್ಯ ಇದ್ದೇ ಇದೆ... ನಿನ್ನ ಆಂಗಲ್‌ನಲ್ಲಿ ನನಗೆ ನೋಡಬೇಕು ಅನಿಸುತ್ತಿಲ್ಲ... ಇದಕ್ಕೆ ಯಾಕೆ ಇಷ್ಟು ತಲೆ ಬಿಸಿ ಮಾಡಿಕೊಂಡಿದ್ದೀಯ... ಅರ್ಥ ಆಗುತ್ತಿಲ್ಲ...' ಅಂದ.

'ಇರಬಹುದು...' ತಕ್ಷಣವೇ ಹೇಳಿದೆ. 'ಆದರೆ ಈ ಬದಲಾವಣೆ ನಾಳೆ ಗಂಭೀರವಾದ ಸಮಸ್ಯೆ ಆದರೆ ಆಗೇನು ಮಾಡುತ್ತೀಯ ?'

ಅವನು ಅವಾಕ್ಕಾದವನಂತೆ ನನ್ನ ಮುಖವನ್ನೇ ನೋಡಿದ. ನಾನು ಹೇಳಿದೆ, 'ಕಾಲಕ್ಕೆ ವೇಗ ಇದೆ ಕಣೋ... ಪ್ರಶ್ನಾಳನ್ನ ಹಣ ಕೊಟ್ಟು ಉಳಿಸಿಕೊಳ್ಳಬಹುದು ಅಂತೀಯ?' ಖಾರವಾದೆ.

'ಅವಳ ಜೊತೆ ನಾನು ಮಾತನಾಡಲೇಬೇಕು ಅನ್ನಿಸಿದೆ. ಅಷ್ಟೆ... ಇದಕ್ಕೆ ಮೇಲೆ ಏನೂ